# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1) | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1364 |
| 2) | ಮಾನ್ಯ ಸದಸ್ಯರ ಹೆಸರು | ಶ್ರೀ ಶಶೀಲ್.ಜಿ.ನಮೋಶಿ (ಶಿಕ್ಷಕರ ಕ್ಷೇತ್ರದಿಂದ ಚುನಾಯಿತರಾದವರು) |
| 3) | ಉತ್ತರಿಸಬೇಕಾದ ದಿನಾಂಕ | 16/03/2026 |
| 4) | ಉತ್ತರಿಸುವವರು | ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿನ ಜಾರಿಗೆ ಬಂದಿರುವ ಪರಿಷ್ಕೃತ ಅನುದಾನಿತ ಸಂಹಿತೆಯಲ್ಲಿ ನಮೂದಿಸಲಾಗಿರುವ ಕಿರಿಯ ತರಬೇತಿ ಅಧಿಕಾರಿಗಳು ಹಾಗೂ ಇತರ ಸಿಬ್ಬಂದಿಗಳ ಸಂಖ್ಯೆ ಕೇಂದ್ರ ಡಿಜಿಇಟಿ ಟ್ರೈನಿಂಗ್ ಮ್ಯಾನ್ಯುಯಲ್ ಹಾಗೂ ಇಲಾಖೆಯ ಸುತ್ತೋಲೆಗಳಲ್ಲಿ ಹೇಳಲಾಗಿರುವ ಸಂಖ್ಯೆಗೆ ವ್ಯತಿರಿಕ್ತವಾಗಿ ಇರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು. |
| ಆ) | ಈ ರೀತಿಯ ಸಿಬ್ಬಂದಿಗಳ ಸಂಖ್ಯೆ ಡಿಜಿಇಟಿ ಸೂಚಿಸಿರುವ ನಿಯಮಾವಳಿಗೆ ವಿರುದ್ಧವಾಗಿ ಇದ್ದಲ್ಲಿ, ಭವಿಷ್ಯದಲ್ಲಿ ಐಟಿಐ ಸಂಸ್ಥೆಗಳ ಶಾಶ್ವತ ಸಂಯೋಜನೆಗೆ ತೊಡಕಾಗುತ್ತದೆ ಎನ್ನುವ ಗಂಭೀರತೆಯ ಅರಿವು ಸರ್ಕಾರಕ್ಕೆ ಬಂದಿದೆಯೇ; | ಪರಿಷ್ಕೃತ ಅನುದಾನ ಸಂಹಿತೆ-2025ರ Staffing Pattern ರಲ್ಲಿರುವ ಭೋಧಕ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶವಿರುತ್ತದೆ.<br><br>ಪರಿಷ್ಕೃತ ಅನುದಾನ ಸಂಹಿತೆ-2025 ರ ಚಾಪ್ಟರ್-3 ನಿಯಮ 4 ಕಂಡಿಕೆ (13) ರಲ್ಲಿ, The Grant-in-Aid shall be given only for the teaching posts. However, any Non-teaching post which is currently admitted to Grant-in-Aid, may be continued until the present incumbent continues to be in service ಎಂದು ತಿಳಿಸಲಾಗಿರುತ್ತದೆ. ಅದರಂತೆ ಬೋಧಕೇತರ ಹುದ್ದೆಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಅವಕಾಶಗಳಿರುವುದಿಲ್ಲ.<br><br>ಡಿಜಿಟಿ ನವದೆಹಲಿ ರವರ ಟ್ರೇನಿಂಗ್ ಮ್ಯಾನ್ಯುಯಲ್ ಪ್ರಕಾರ ಇತರೆ ಸಿಬ್ಬಂದಿಗಳ ನೇಮಕಾತಿ ಸಂಬಂಧ ಸಂಸ್ಥೆಯ ಆಡಳಿತ ಮಂಡಳಿಯವರು ಪ್ರತ್ಯೇಕ ವ್ಯವಸ್ಥೆಯನ್ನು ಕಲ್ಪಿಸಿಕೊಳ್ಳಬಹುದಾಗಿರುತ್ತದೆ. |
| ಇ) | ಸರ್ಕಾರಿ ಹಾಗೂ ಅನುದಾನಿತ ಐಟಿಐ ಸಂಸ್ಥೆಗಳಲ್ಲಿ ಇಂಜಿನಿಯರಿಂಗ್ ಡ್ರಾಯಿಂಗ್ ಹಾಗೂ ಕಾರ್ಯಗಾರ ಲೆಕ್ಕಚಾರ ವಿಷಯ ಬೋಧಕರನ್ನು, ಡಿಜಿಇಟಿ ಸೂಚಿಸಿರುವ ತರಬೇತಿದಾರರ ಸಂಖ್ಯೆಗೆ ವಿರುದ್ಧವಾಗಿ ಅವರ ಸೇವೆಯನ್ನು ಕಡಿತಗೊಳಿಸಿ, ಅವರ ಸೇವೆಯನ್ನು ಇತರ ವಿಷಯಗಳ ಬೋಧನೆಯಲ್ಲಿ ಬಳಸಿಕೊಳ್ಳುವ ಉದ್ದೇಶ ಸರ್ಕಾರಕ್ಕೆ ಇದೆಯೇ; | ಸರ್ಕಾರಿ ಐಟಿಐ ಸಂಸ್ಥೆಗಳಲ್ಲಿ ಇಂಜಿನಿಯರಿಂಗ್ ಡ್ರಾಯಿಂಗ್ ಹಾಗೂ ಕಾರ್ಯಾಗಾರ ಲೆಕ್ಕಾಚಾರ ವಿಷಯ ಬೋಧಕರನ್ನು ಡಿಜಿಇಟಿ ಸೂಚಿಸಿರುವ ತರಬೇತಿದಾರರ ಸಂಖ್ಯೆಗೆ ವಿರುದ್ಧವಾಗಿ ಅವರ ಸೇವೆಯನ್ನು ಕಡಿತಗೊಳಿಸಿರುವುದಿಲ್ಲ. ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳನ್ನು 2021-22ನೇ ಸಾಲಿನಿಂದ ಪ್ರತಿ ವಿಷಯವನ್ನು ವಾರ್ಷಿಕವಾಗಿ ಬೋಧಿಸಲು 80 ಘಂಟೆಗಳ ಅವಧಿ ಹಾಗೂ 50 ಅಂಕಗಳಿಗೆ ಪರೀಕ್ಷೆ ನಡೆಸಲಾಗುತ್ತಿರುವುದನ್ನು ಡಿಜಿಟಿ ರವರು ಪ್ರತಿ ವಿಷಯವನ್ನು ವಾರ್ಷಿಕವಾಗಿ ಬೋಧಿಸಲು 40 ಘಂಟೆಗಳ ಅವಧಿಗೆ ನಿಗದಿ ಪಡಿಸಿ, ಪ್ರತಿ ವಿಷಯಕ್ಕೆ 12 ಅಂಕಗಳಿಗೆ ಪರೀಕ್ಷೆ ನಿಗದಿಪಡಿಸಿರುತ್ತಾರೆ ಹಾಗೂ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳನ್ನು ವೃತ್ತಿ ತತ್ವ (Trade Theory) ವಿಷಯದ ಜೊತೆ ವಿಲೀನಗೊಳಿಸಲಾಗಿರುತ್ತದೆ. ವಾರ್ಷಿಕವಾಗಿ ಪ್ರತಿ ವಿಷಯ ಬೋಧಿಸಲು 40 ಘಂಟೆಗಳ ಕಾಲಾವಧಿ ಸೀಮಿತಗೊಳಿಸಿ Trade Theory Subject ಜೊತೆಗೆ ವಿಲೀನಗೊಳಿಸಿರುವುದರಿಂದ ಒಂದು ವೃತ್ತಿ ಘಟಕಕ್ಕೆ ವಾರದಲ್ಲಿ ಪ್ರತಿ ವಿಷಯಕ್ಕೆ 45 ನಿಮಿಷಗಳ ಅವಧಿ ಬೋಧಿಸಬೇಕಾಗಿರುತ್ತದೆ. |

| | | |
|---|---|---|
| | | ಈ ಹಿನ್ನೆಲೆಯಲ್ಲಿ ಡಿ.ಜಿ.ಟಿ ರವರ ಪತ್ರ ಸಂಖ್ಯೆ MSDE (DGT)-0708/2022-CD Dated: 10.11.2022 ಮತ್ತು DGT-MIS011/1/2025-0/0 DIR (TC) [57369] Dated: 16.01.2026 ರಲ್ಲಿ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳ ಬೋಧನೆಗೆ ಕ್ರಮವಾಗಿ ಪ್ರತಿ 144 ತರಬೇತಿದಾರರಿಗೆ ಒಬ್ಬರು ಕಿರಿಯ ತರಬೇತಿ ಅಧಿಕಾರಿ ಹಾಗೂ ಹೆಚ್ಚುವರಿಯಾಗಿ ಪ್ರವೇಶಾತಿ ಪಡೆಯುವ ಪ್ರತಿ 144 ತರಬೇತಿದಾರರಿಗೆ ಒಬ್ಬರು ಕಿರಿಯ ತರಬೇತಿ ಅಧಿಕಾರಿ ಬೋಧಿಸಲು ಅವಶ್ಯವಿರುವುದಾಗಿ ತಿಳಿಸಿರುತ್ತಾರೆ.<br><br>ಡಿ.ಜಿ.ಟಿ ರವರು ಪ್ರತಿ ವಿಷಯವನ್ನು ಬೋಧಿಸಲು 40 ಗಂಟೆಗಳಿಗೆ ಸೀಮಿತಗೊಳಿಸಿರುವುದರಿಂದ 1997 ರ ಅನುದಾನ ಸಂಹಿತೆಯಲ್ಲಿ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳ ಬೋಧನೆಗೆ ಪ್ರತಿ 4 ಘಟಕಕ್ಕೆ ಒಬ್ಬರು ಕಿರಿಯ ತರಬೇತಿ ಅಧಿಕಾರಿಯವರಿಗೆ ವೇತನಾನುದಾನ ನೀಡಲು ಅವಕಾಶವಿರುತ್ತದೆ. ಸದರಿ ವಿಷಯಗಳ ಬೋಧನಾ ಅವಧಿ ಹಾಗೂ ಪರೀಕ್ಷಾ ಅಂಕಗಳನ್ನು ಡಿಜಿಟಿ ರವರು ಕಡಿತಗೊಳಿಸಿರುವುದರಿಂದ ಪರಿಷ್ಕೃತ ಅನುದಾನ ಸಂಹಿತೆ-2025 ರ ಷಡ್ಯೂಲ್-2 ರಲ್ಲಿ 8 ಘಟಕಗಳಿಗೆ (160 ತರಬೇತಿದಾರರು) ಒಬ್ಬರು ಕಿರಿಯ ತರಬೇತಿ ಅಧಿಕಾರಿ ಯವರಿಗೆ ವೇತನಾನುದಾನ ನೀಡಲು ಅವಕಾಶವಿರುತ್ತದೆ. ಹಾಗೂ ಸದರಿ 8 ಘಟಕದಲ್ಲಿನ 160 ತರಬೇತಿದಾರರಿಗೆ ಬೋಧಿಸಲು ವಾರಕ್ಕೆ 12 ಘಂಟೆಗಳ ಬೋಧನಾ ಕಾರ್ಯಭಾರವಿರುತ್ತದೆ. ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳನ್ನು ಬೋಧಿಸಲು ಕಾರ್ಯಭಾರ ಕಡಿಮೆ ಇರುವುದರಿಂದ ಡಿಜಿಟಿ ನಿಯಮಾನುಸಾರ ಬೋಧಿಸಲು ಅರ್ಹರಿರುವ ಹೆಚ್ಚುವರಿ ಬೋಧಕ ಸಿಬ್ಬಂದಿಯನ್ನು ಇತರೆ ಅನುದಾನಿತ ಸಂಸ್ಥೆಗಳಲ್ಲಿನ ಖಾಲಿ ಹುದ್ದೆಗಳ ಎದುರಿಗೆ ವರ್ಗಾಯಿಸಿ ಬೋಧನೆಗೆ ಬಳಸಿಕೊಳ್ಳಲಾಗುವುದು. |
| ಈ) | 2022 ನವೆಂಬರ್ ಹಾಗೂ 2026 ಜನವರಿ ತಿಂಗಳಲ್ಲಿ ಡಿಜಿಇಟಿ ಹೊರಡಿಸಿರುವ ಸುತ್ತೋಲೆಯಲ್ಲಿ 0-144 ತರಬೇತಿಗಳಿಗೆ ಸದರಿ ವಿಷಯ ಬೋಧನೆಗೆ ಪ್ರತ್ಯೇಕ ಕಿರಿಯ ತರಬೇತಿ ಅಧಿಕಾರಿ ನಿಯೋಜನೆ ಕುರಿತು ಪ್ರಸ್ತಾಪಿಸಿರುವ ಅಂಶಗಳ ಕುರಿತು ಸರ್ಕಾರಕ್ಕೆ ಮಾಹಿತಿ ಇದೆಯೇ; | ಹೌದು. |
| ಉ) | ಸರ್ಕಾರಿ ಹಾಗೂ ಅನುದಾನಿತ ಐಟಿಐ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಇಂಜಿನಿಯರಿಂಗ್ ಡ್ರಾಯಿಂಗ್ ಹಾಗೂ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ವಿಷಯಕ್ಕೆ ನೇಮಕಾತಿ ಆಗಿರುವ ಕಿರಿಯ ತರಬೇತಿ ಅಧಿಕಾರಿಗಳನ್ನು ಇತರ ವಿಷಯ ಬೋಧನೆಗೆ ವರ್ಗಾವಣೆ/ನಿಯೋಜನೆ ಮಾಡಿದಲ್ಲಿ, ಸದರಿ ವಿಷಯ ಬೋಧನೆಗೆ ಡಿಜಿಇಟಿ ನಿಯಮಾವಳಿಗಳಿಗೆ ಪೂರಕವಾಗಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳು ಯಾವುವು; | ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಇಂಜಿನಿಯರಿಂಗ್ ಡ್ರಾಯಿಂಗ್ ಹಾಗೂ ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ವಿಷಯಕ್ಕೆ ನೇಮಕ ಆಗಿರುವ ಕಿರಿಯ ತರಬೇತಿ ಅಧಿಕಾರಿಗಳನ್ನು ಇತರೆ ವಿಷಯ ಬೋಧನೆಗೆ ವರ್ಗಾವಣೆ/ನಿಯೋಜನೆ ಮಾಡಿರುವುದಿಲ್ಲ.<br><br>ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳನ್ನು ಡಿ.ಜಿ.ಟಿ ರವರು ಪ್ರತಿ ವಿಷಯ ವನ್ನು ಬೋಧಿಸಲು 40 ಗಂಟೆಗಳಿಗೆ ಸೀಮಿತಗೊಳಿಸಿ Trade Theory Subject ಜೊತೆಗೆ ವಿಲೀನಗೊಳಿಸಿರುವುದರಿಂದ ಹೆಚ್ಚುವರಿ ಸಿಬ್ಬಂದಿಯನ್ನು ಪರಿಷ್ಕೃತ ಅನುದಾನ ಸಂಹಿತೆ 2025 ರ CHAPTER V ನಿಯಮ 8 ಕಂಡಿಕೆ ( 23 ) ರಂತೆ ಇತರೆ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಖಾಲಿ ಇರುವ ಅನುದಾನಿತ ಹುದ್ದೆಗಳ ಎದುರಿಗೆ ವರ್ಗಾಯಿಸಲು ಆಯುಕ್ತಾಲಯದಿಂದ ದಿನಾಂಕ:17/02/2026 ರಂದು ಸುತ್ತೋಲೆ ಹೊರಡಿಸಿ ಪ್ರಸ್ತಾವನೆ ಸಲ್ಲಿಸಲು ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಹೆಚ್ಚುವರಿ ಹುದ್ದೆಗಳನ್ನು ಖಾಲಿ ಹುದ್ದೆಗಳ ಎದುರಿಗೆ ವರ್ಗಾಯಿಸಲು ಕ್ರಮವಹಿಸಲಾಗುವುದು. |

—3

| | | |
|---|---|---|
| ಊ) | ಕಳೆದ 20ಕ್ಕಿಂತ ಅಧಿಕ ವರ್ಷಗಳಿಂದ ಸದರಿ ವಿಷಯ ಬೋಧನೆ ಮಾಡುತ್ತಿರುವ ಕಿರಿಯ ತರಬೇತಿ ಅಧಿಕಾರಿಗಳು ನಿವೃತ್ತಿ ಅಂಚಿನಲ್ಲಿ ಇರುವಾಗ ಬೇರೆ ವಿಷಯಗಳ ಬೋಧನೆಗೆ ಆದೇಶ ನೀಡುವುದರಿಂದ, ಬದಲಾಗುತ್ತಿರುವ ತಂತ್ರಜ್ಞಾನ ಹಾಗೂ ಪಠ್ಯ ಕ್ರಮಗಳಿಂದಾಗಿಯೂ ತರಬೇತಿಗೆ ತೊಡಕಾಗುತ್ತದೆ ಎನ್ನುವ ಗಂಭೀರತೆಯ ಅರಿವು ಸರ್ಕಾರಕ್ಕೆ ಬಂದಿದೆಯೇ? | ಕಾರ್ಯಾಗಾರ ಲೆಕ್ಕಾಚಾರ ಮತ್ತು ವಿಜ್ಞಾನ ಹಾಗೂ ಇಂಜಿನಿಯರಿಂಗ್ ಡ್ರಾಯಿಂಗ್ ವಿಷಯಗಳನ್ನು ಡಿ.ಜಿ.ಟಿ ರವರು ಪ್ರತಿ ವಿಷಯವನ್ನು ಬೋಧಿಸಲು 40 ಗಂಟೆಗಳಿಗೆ ಸೀಮಿತಗೊಳಿಸಿ Trade Theory Subject ಜೊತೆಗೆ ವಿಲೀನಗೊಳಿಸಿರುವುದರಿಂದ ಹೆಚ್ಚುವರಿ ಸಿಬ್ಬಂದಿಯನ್ನು ಪರಿಷ್ಕೃತ ಅನುದಾನ ಸಂಹಿತೆ 2025 ರ CHAPTER V ನಿಯಮ 8 ಕಂಡಿಕೆ ( 23 ) ರಂತೆ ಇತರೆ ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳಲ್ಲಿ ಖಾಲಿ ಇರುವ ಅನುದಾನಿತ ಹುದ್ದೆಗಳ ಎದುರಿಗೆ ನಿಯಮಾನುಸಾರ ಅರ್ಹರಿರುವ ಸಿಬ್ಬಂದಿಗಳನ್ನು ವರ್ಗಾಯಿಸಲು ಆಯುಕ್ತಾಲಯದಿಂದ ದಿನಾಂಕ:17/02/2026 ರಂದು ಸುತ್ತೋಲೆ ಹೊರಡಿಸಿ ಪ್ರಸ್ತಾವನೆ ಸಲ್ಲಿಸಲು ಮಾರ್ಗಸೂಚಿಗಳನ್ನು ನೀಡಲಾಗಿರುತ್ತದೆ. ಸ್ವೀಕೃತಗೊಂಡ ಪ್ರಸ್ತಾವನೆಗಳನ್ನು ನಿಯಮಾನುಸಾರ ಪರಿಶೀಲಿಸಿ ಹೆಚ್ಚುವರಿ ಹುದ್ದೆಗಳನ್ನು ಖಾಲಿ ಹುದ್ದೆಗಳ ಎದುರಿಗೆ ವರ್ಗಾಯಿಸಲು ಕ್ರಮವಹಿಸಲಾಗುವುದು. ತರಬೇತಿಗಳಿಗೆ ಯಾವುದೇ ತೊಡಕಾಗುವುದಿಲ್ಲ. |

**ಸಂಖ್ಯೆ: ಕೌಉಜೀಇ 12 ಕೈತಪ್ರ 2026**

(ಡಾ. ಶರಣಪ್ರಕಾಶ ಆರ್ ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು.